**182783/2021**

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ**:- ರಾಜ್ಯ ಸರ್ಕಾರದ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿಗಳು ಬಳಸುತ್ತಿರುವ ಇ-ಹಸ್ತಾಕ್ಷರ (ಇ-ಸೈನ್) ಗಳಿಗೆ ಶುಲ್ಕ ವಿಧಿಸುವ ಕುರಿತು.

**ಓದಲಾಗಿದೆ**:- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಕಡತ ಸಂಖ್ಯೆ: CeG-18011/2/2017-(529434)

**ಪ್ರಸ್ತಾವನೆ:**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ವ್ಯಾಪ್ತಿಯಲ್ಲಿನ ಇ-ಆಡಳಿತ ಕೇಂದ್ರವು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ / ವಿಶ್ವವಿದ್ಯಾನಿಲಯ ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳಿಗೆ ಹಲವು ಇ-ಆಡಳಿತ ಸೇವೆಗಳನ್ನು ಒದಗಿಸಲಾಗುತ್ತಿದ್ದು, ಅದರಲ್ಲಿ ಇ-ಹಸ್ತಾಕ್ಷರ (e-sign) ಪ್ರಮುಖ ಸೇವೆಯಾಗಿರುತ್ತದೆ. ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳಿಗೂ ಇ-ಹಸ್ತಾಕ್ಷರ (e-sign) ಸೇವೆಯನ್ನು ಇ-ಆಡಳಿತ ಕೇಂದ್ರವು ಇಲ್ಲಿಯವರೆಗೂ ಉಚಿತವಾಗಿ ಒದಗಿಸಲಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28-06-2021ರಂದು ನಡೆದ ಸಭೆಯಲ್ಲಿ ಇ-ಹಸ್ತಾಕ್ಷರ (e-sign)ಸೇವೆಯನ್ನು ಉಚಿತವಾಗಿ ಒದಗಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

> "PD, KRDH, briefed the request received from KPCL for providing e-Signs for ERP solution developed in house and requested for directions, whether e-Signs should be provided for the ERP solutions & application developed by Universities, Boards, Corporations. The Chair instructed that e-Signs would be very costly for Government users who have to sign repeatedly. Further technically also it would be difficult to maintain number of public keys against some users as they change for each e-Sign. Instead we may ask the Boards, Corporations, Societies and Universities to procure DSCs and also directed PD e-Office, that e-Signs should be given on payment basis to Department's application used by citizens, which are developed by Boards and Corporations, etc. The Chair also directed henceforth the e-Sign services to be provided on chargeable basis to all PSU's (Public Sector Units) and that too for citizen signing".

M/s. CDAC ಮತ್ತು M/s. NSDL ಗಳಿಂದ ರೂ.1.20 +ತೆರಿಗೆಯನ್ನು ಪಾವತಿಸಿ ಖರೀದಿಸಿದ ನಂತರ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳಿಗೆ ಒದಗಿಸುತ್ತಾ ಬಂದಿರುತ್ತದೆ. ಆದ್ದರಿಂದ, ಮೇಲಿನ ನಿರ್ಣಯದನ್ವಯ ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲಾ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳ ಯೋಜನೆಗಳಲ್ಲಿ ಬಳಸುವ ಪ್ರತಿ ಇ-ಹಸ್ತಾಕ್ಷರ (e-sign) ಕ್ಕೆ ರೂ.1.20 +ತೆರಿಗೆಯನ್ನು ಇ-ಆಡಳಿತ ಕೇಂದ್ರಕ್ಕೆ ಪಾವತಿಸಲು ಮಂಜೂರಾತಿ ನೀಡುವಂತೆ ಮುಖ್ಯಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಮೇಲೆ ಓದಲಾದ ಕಡತದ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲಾ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳ ಯೋಜನೆಗಳಲ್ಲಿ ಬಳಸುವ ಪ್ರತಿ ಇ-ಹಸ್ತಾಕ್ಷರ (e-sign) ಕ್ಕೆ ರೂ.1.20 + ತೆರಿಗೆಯನ್ನು ಇ-ಆಡಳಿತ ಕೇಂದ್ರಕ್ಕೆ ಪಾವತಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 89 ಪಿಆರ್‌ಜೆ 2021**
**ಬೆಂಗಳೂರು, ದಿನಾಂಕ : 08 ನೇ ನವೆಂಬರ್ 2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ಎಲ್ಲಾ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳ ಯೋಜನೆಗಳಲ್ಲಿ ಬಳಸುವ ಪ್ರತಿ ಇ-ಹಸ್ತಾಕ್ಷರ (e-sign) ಕ್ಕೆ ರೂ.1.20 + ತೆರಿಗೆಯನ್ನು ಇ-ಆಡಳಿತ ಕೇಂದ್ರಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಸದರಿ ಶುಲ್ಕವನ್ನು ಎಲ್ಲಾ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು ಇ-ಆಡಳಿತ ಕೇಂದ್ರಕ್ಕೆ ಪಾವತಿಸಲು ಪ್ರತಿ ತ್ರೈಮಾಸಿಕ್ಕೆ ಬಳಕೆಯಾಗಿರುವ ಇ-ಹಸ್ತಾಕ್ಷರ (e-sign)ಗಳಿಗೆ ತಗಲಿರುವ ವೆಚ್ಚದ ಮಾಹಿತಿಯನ್ನು ಒದಗಿಸಲಾಗುವುದು.

ಸದರಿ ಮೊತ್ತವನ್ನು ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ, ವಿಶ್ವವಿದ್ಯಾನಿಲಯಗಳು ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳಿಗೆ ಕೆ.ಆರ್.ಡಿ.ಹೆಚ್ ಯೋಜನಾ ವಿಭಾಗ ಇ-ಆಡಳಿತ ಕೇಂದ್ರದ ಖಾತೆ ಸಂಖ್ಯೆ: 40474991480 ಎಸ್.ಬಿ.ಐ ಬ್ಯಾಂಕ್, ವಿಧಾನಸೌಧ ಶಾಖೆ (IFSC Code: SBIN0040277)ಗೆ RTGS/ NEFT ಮೂಲಕ 15 ದಿನದೊಳಗೆ ಪಾವತಿಸಿ ಇ-ಹಸ್ತಾಕ್ಷರ (e-sign) ಸೇವೆಯನ್ನು ಮುಂದುವರೆಸಿಕೊಳ್ಳುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪ್ರದೀಪ್ ಕುಮಾರ್ ಬಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ:

1. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನಸೌಧ / ವಿಕಾಸಸೌಧ / ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಎಲ್ಲಾ ನಿಗಮ / ಮಂಡಳಿ / ಆಯೋಗ / ನಿಯಮಿತ ಕಂಪನಿ / ವಿಶ್ವವಿದ್ಯಾನಿಲಯ ಹಾಗೂ ಇತ್ಯಾದಿ ಸ್ವಾಯತ್ತ ಸಂಸ್ಥೆಗಳು - ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು
7. ಶಾಖಾ ರಕ್ಷ ಕಡತ.